ಅಂತವರನ್ನು ವರ್ಗಾವಣೆ ಮಾಡಿದೆ, ಬೇರೆ ಕಡೆ ವರ್ಗಾವಣೆ ಮಾಡಿಕೊಡಿ ಎಂದು ಕೇಳಿದವರನ್ನು ವರ್ಗ ಮಾಡಿದ್ದೇವೆ. ಸಾರ್ವಜನಿಕರಿಂದ ದೂರು ಬಂದಿದ್ದರೆ ಅಂತಹವರನ್ನು ವರ್ಗಾವಣೆ ಮಾಡಿದ್ದೇವೆ. ಯಾವ ದೂರು ಇಲ್ಲದಿದ್ದವರು ೨೧ ಜನ ಇದ್ದಾರೆ.

ಹೆಗ್ಗಡ ದೇವನಕೋಟೆಯಲ್ಲಿ ನಿರ್ಮಿಸಲಾಗುತ್ತಿರುವ ಸಾರ್ವಜನಿಕ ಆಸ್ಪತ್ರೆ

೨೩(೩೪೦) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ) ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೧. ಹೆಗ್ಗಡ ದೇವನ ಕೋಟೆಯಲ್ಲಿ ನಿರ್ಮಿಸಲಾಗುತ್ತಿರುವ ೫೦ ಹಾಸಿಗೆಯ ಸಾರ್ವತ್ರಿಕ ಆಸ್ಪತ್ರೆಗೆ ಕಟ್ಟಡ ನಿರ್ಮಾಣ ಯಾವಾಗ ಪ್ರಾರಂಭವಾಯಿತು ? ಈಗ ಯಾವ ಹಂತದಲ್ಲಿದೆ ?

೨. ಈ ಕಟ್ಟಡ ನಿರ್ಮಾಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

೩. ನಿರ್ಮಾಣದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

೧) ಕಟ್ಟಡ ನಿರ್ಮಾಣ ದಿನಾಂಕ ೨೨-೧೧-೧೯೮೨ ರಂದು ಪ್ರಾರಂಭವಾಯಿತು. ಈಗ ಪೂರ್ಣಗೊಳ್ಳುವ ಹಂತದಲ್ಲಿದೆ.

೨) ೧೯೮೬-೮೭ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

೩) ಸಾಕಷ್ಟು ಸಿಮೆಂಟ್ ಮತ್ತು ಉಕ್ಕು ಸರಬರಾಜು ಇಲ್ಲದ ಕಾರಣ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಹೆಗ್ಗಡದೇವನಕೋಟೆಯಲ್ಲಿ ನಿರ್ಮಿಸಲಾಗುತ್ತಿರುವ ಆಸ್ಪತ್ರೆಯ ಕಟ್ಟಡ ನಿರ್ಮಾಣದ ವಿಳಂಬಕ್ಕೆ ಸಿಮೆಂಟ್ ಮತ್ತು ಉಕ್ಕು ಸರಬರಾಜು ಇಲ್ಲದ ಕಾರಣ ಎಂದು ಹೇಳುತ್ತಿದ್ದಾರೆ. ಒಂದು ವರ್ಷದಿಂದಲೂ ಇದೇ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಿದ್ದಾರೆ. ಈ ಆಸ್ಪತ್ರೆ ಕಟ್ಟಡ ಈಗಾಗಲೇ ಆರು ತಿಂಗಳ ಹಿಂದೆ ಆಗಬೇಕಾಗಿತ್ತು. ಈ ಪ್ರಶ್ನೆ ಬಗ್ಗೆ ಲೋಕೋಪಯೋಗಿ ಮಂತ್ರಿಗಳು ಉತ್ತರ ಹೇಳಬೇಕಾಗಿತ್ತು ಕಾರಣಾಂತರದಿಂದ ಆರೋಗ್ಯ ಮಂತ್ರಿಗಳು ಉತ್ತರಕೊಡುತ್ತಿದ್ದಾರೆ. ಈ ವಿಚಾರ ಇವರಿಗೆ ಸೇರುವುದಿಲ್ಲವೆಂದು ನನ್ನ ಭಾವನೆ. ಸಂಬಂಧಪಟ್ಟ ಮಂತ್ರಿಗಳು ಇದನ್ನು ಆದಷ್ಟು ಬೇಗ ಮಾಡಿಕೊಡಬೇಕು ಹಾಗೂ ವೈದ್ಯರುಗಳಿಗೆ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಟ್ಟಡ ಪೂರ್ಣವಾಗಿದೆ. ಉಳಿದಿರುವುದು ಕೇವಲ ಸ್ಯಾನಿಟರಿ ಮತ್ತು ಎಲೆಕ್ಟ್ರಿಫಿಕೇಷನ್ ಮಾತ್ರ ಒಂದೆರಡು ತಿಂಗಳೊಳಗೆ ಕಟ್ಟಡ ಪೂರ್ಣವಾಗುತ್ತದೆ. ಅನಂತರ ಉಪಯೋಗಕ್ಕೆ ಯೋಗ್ಯವಾಗುತ್ತದೆ. ೧೯೮೨ರಿಂದ ಪ್ರಾರಂಭವಾಗಿ ಏಕೆ ನಿಧಾನವಾಯಿತು ಎನ್ನುವ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಸಿಮೆಂಟ್ ಮತ್ತು ಉಕ್ಕು ಸಕಾಲದಲ್ಲಿ ಒದಗಿಸುವುದಕ್ಕೆ ಆಗದೆ ನಿಧಾನವಾಯಿತು. ೧೫ ಲಕ್ಷ ಅಂದಾಜುವೆಚ್ಚದಲ್ಲಿ ಪ್ರಾರಂಭವಾದ ಕಟ್ಟಡ, ಇವತ್ತು ೨೩ ಲಕ್ಷ ಖರ್ಚಾಗಿದೆ. ಈಗ ಕೆಲಸ ಮುಗಿದಿದೆ.

ಮೈಸೂರು ಅರಮನೆಯ ಪ್ರವೇಶ ಧನದಿಂದ ಸಂಗ್ರಹವಾದ ಹಣ

೨೪(೧೬೪ ಬಿ) ಶ್ರೀ ವೇದಾಂತ ಹೆಮ್ಮಿಗೆ(ಕೃಷ್ಣರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮೈಸೂರು ಅರಮನೆಯ ಪ್ರವೇಶ ಧನದಿಂದ ಕಳೆದ ಮೂರು ವರ್ಷಗಳಿಂದ ಸಂಗ್ರಹವಾದ ಹಣವೆಷ್ಟು ?

ಆ) ಇದರಲ್ಲಿ ಅರಮನೆ ನವೀಕರಣಕ್ಕೆ ಖರ್ಚಾಗಿರುವ ಹಣವೆಷ್ಟು ?

ಇ) ಈ ಅರಮನೆ ಸರ್ಕಾರಕ್ಕೆ ಸೇರಿದ್ದೆ ಅಥವಾ ರಾಜ್ಯ ವಂಶಕ್ಕೆ ಸೇರಿದ್ದೆ ?